ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಲ್ಲಿ ಪ್ರಯೋಜನ ಪಡೆದ ಕುಟುಂಬಗಳ ವಿವರ ಕೆಳಕಂಡಂತಿದೆ.

ವರ್ಷ	ವಿಶೇಷ ಘಟಕ ಯೋಜನೆ	ಗಿರಿಜನ ಉಪ ಯೋಜನೆ
೧೯೮೫-೮೬	೫೭೫೩	೪೯೪
೧೯೮೬-೮೭	೩೬೫೮	೩೨೫೦

ರಾಜ್ಯದಲ್ಲಿ ಬೀಡಿ ಕಾರ್ಮಿಕರ ಕನಿಷ್ಠ ವೇತನ

೧೪೭೭. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ (ಜಿಲ್ಲಾವಾರು ಸಂಖ್ಯೆ ಒದಗಿಸುವುದು).

ಆ) ೧೯೮೫-೮೬ ರಿಂದ ಇದುವರೆವಿಗೂ ನೀಡಿರುವ ಕನಿಷ್ಠ ವೇತನ ಎಷ್ಟು ?

ಇ) ಬಳಕೆದಾರರ ಬೆಲೆ ಸೂಚ್ಯಾಂಕ ಹೆಚ್ಚಾಗಿರುವುದರಿಂದ ಬೀಡಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪರಿಷ್ಕರಿಸುವ ಸೂಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

ಅ) ಲಭ್ಯವಿರುವ ದಾಖಲಾತಿಯ ಆಧಾರದ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು ೩,೫೫,೨೪೪ ಬೀಡಿ ಕಾರ್ಮಿಕರಿರುತ್ತಾರೆ. ಜಿಲ್ಲಾವಾರು ಅಂಕಿ ಅಂಶ ತೋರಿಸುವ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

ಆ) ೧೯೮೫-೮೬ನೇ ಸಾಲಿನಲ್ಲಿ ಒಂದು ಸಾವಿರ ಬೀಡಿ ಸುತ್ತಲು ಕನಿಷ್ಠ ವೇತನ ರೂ. ೭-೪೦ ಜುಲೈ ೧೯೮೬ನೇ ಸಾಲಿನಲ್ಲಿ ಕನಿಷ್ಠ ವೇತನವನ್ನು ರೂ. ೭-೪೦ ರಿಂದ ರೂ. ೧೧-೫೦ಕ್ಕೆ (ಸಾವಿರ ಬೀಡಿ ಸುತ್ತಲು) ಏರಿಸಿ ಪರಿಷ್ಕರಣೆ ಮಾಡಲಾಯಿತು. ಹೆಚ್ಚುವರಿಯಾಗುವ ಗ್ರಾಹಕ ಬೆಲೆ ಸೂಚ್ಯಾಂಕ ಗಳನ್ನು ಗಮನದಲ್ಲಿಟ್ಟುಕೊಳ್ಳುವುದಕ್ಕೆ ಜೀವನ ನಿರ್ವಹಣಾ ಭತ್ಯೆಯನ್ನು ಅಳವಡಿಸಲಾಗಿದೆ. ಇಂದು ಒಂದು ಸಾವಿರ ಬೀಡಿ ಸುತ್ತುವ ಕಾರ್ಮಿಕರು ಈ ಕೆಳಕಂಡಂತೆ ಕನಿಷ್ಠ ವೇತನವನ್ನು ಪಡೆಯುತ್ತಿದ್ದಾರೆ.

ಮೂಲ ವೇತನ	ರೂ ೧೧-೫೦
ತುಟ್ಟಿಭತ್ಯೆ	ರೂ. ೨-೦೪
ಒಟ್ಟು	ರೂ. ೧೩-೫೪

ಇ) ಹೌದು.

ಜಿಲ್ಲಾವಾರು ಬೀಡಿ ಕಾರ್ಮಿಕರ ಸಂಖ್ಯೆ

ಕ್ರಮ ಸಂಖ್ಯೆ	ಜಿಲ್ಲೆ		ಕಾರ್ಮಿಕರ ಸಂಖ್ಯೆ
೧	೨		೩
೧	ಬೆಂಗಳೂರು	...	೫,೯೫೦
೨	ತುಮಕೂರು	...	೮,೪೪೪
೩	ಕೋಲಾರ	...	೨,೦೨೦
೪	ಮೈಸೂರು	...	೨,೬೬೨
೫	ಮಂಡ್ಯ	...	೩೦೬
೬	ಚಿಕ್ಕಮಗಳೂರು	..	ಇಲ್ಲ
೭	ಮಡಿಕೇರಿ	...	ಇಲ್ಲ
೮	ಹಾಸನ	...	ಇಲ್ಲ
೯	ದಕ್ಷಿಣ ಕನ್ನಡ	...	೩,೧೬,೯೬೫
೧೦	ಶಿವಮೊಗ್ಗ	..	೫೪೦
೧೧	ಧಾರವಾಡ	...	೭,೪೫೫
೧೨	ಉತ್ತರ ಕನ್ನಡ	...	ಇಲ್ಲ
೧೩	ಚಿತ್ರದುರ್ಗ	...	೨,೦೯೩
೧೪	ಬಳ್ಳಾರಿ	...	೧,೭೬೪
೧೫	ಗುಲ್ಬರ್ಗ	...	೧,೧೪೧
೧೬	ರಾಯಚೂರು	...	೨೮೮
೧೭	ಬೀದರ್	...	ಇಲ್ಲ
೧೮	ಬೆಳಗಾಂ	...	೩,೦೧೬
೧೯	ಬಿಜಾಪುರ	...	೨,೬೦೦
		ಒಟ್ಟು	೩,೫೫,೨೪೪

ನಿರುದ್ಯೋಗ ಸಮಸ್ಯೆ ಬಗೆಹರಿಸುವುದು

೧೬೮೨. ಶ್ರೀ ಆರ್. ವೆಂಕಟರಾವಮಯ್ಯ (ಮುಳಬಾಗಿಲು) ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ೧೯೮೭-೮೮ ಮತ್ತು ೧೯೮೮-೮೯ರಲ್ಲಿ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸರ್ಕಾರವು ರೂಪಿಸಿದ ವಿವಿಧ ಯೋಜನೆಗಳು ?

೨. ನಿರುದ್ಯೋಗ ಸಮಸ್ಯೆ ಬಗೆಹರಿಸಲು ಬೀಡಿ ಮತ್ತಿತರ ಕೈಗಾರಿಕೆಗಳಲ್ಲಿ ಉದ್ಯೋಗ ದೊರಕಿಸುವ ಸಹಕಾರ ಸಂಘಗಳನ್ನು ಪ್ರಾಯೋಗಿಕವಾಗಿ ಸ್ಥಾಪಿಸಲು ಸರ್ಕಾರ ಪರಿಶೀಲಿಸುತ್ತಿದೆಯೆ ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

೧. ರಾಜ್ಯದಲ್ಲಿ ಹಾಗೂ ಕೈಗಾರಿಕೆಗಳಲ್ಲಿ ಸಮಾನ ಅಭಿವೃದ್ಧಿಗಾಗಿ ಲಭ್ಯವಿರುವ ವಸ್ತು ಮತ್ತು ಮಾನವ ಶಕ್ತಿ ಸಂಪನ್ಮೂಲಗಳನ್ನು ಬಳಸಿಕೊಂಡು ಕೈಗಾರಿಕೆಗಳಲ್ಲಿ ಅದರಲ್ಲೂ ಮುಖ್ಯವಾಗಿ ಗ್ರಾಮೀಣ ವಲಯದಲ್ಲಿ ಹಾಗೂ ಸಣ್ಣ ಕೈಗಾರಿಕೆಗಳಲ್ಲಿ ಅನೇಕ ಯೋಜನೆಗಳನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಜಾರಿಗೊಳಿಸುತ್ತಿದೆ. ಕೆಲವು ಜನಿಸುವ ಯೋಜನೆಗಳೆಂದರೆ ಕೈಮಗ್ಗ, ಕರಕುಶಲ ಕೈಗಾರಿಕೆ, ತೆಂಗಿನ ನಾರು, ಖಾದಿ ಮತ್ತು ಗ್ರಾಮೋದ್ಯೋಗ, ಜೇನು ಸಾಕಣೆ, ಚರ್ಮ, ಸಹಾಯಕ ಕೈಗಾರಿಕೆ